**Q.P. Code – 56611**

**ಅಂತಿಮ ಎಂ.ಎ. ಪದವಿ ಪರೀಕ್ಷೆ, ಅಕ್ಟೋಬರ್/ನವೆಂಬರ್ 2015**

**(ದೂರ ಶಿಕ್ಷಣ)**

**ಕನ್ನಡ**

**(DPB 510) Paper 2.1 – ಹೊಸಗನ್ನಡ ಸಾಹಿತ್ಯ**

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 80*

***ಸೂಚನೆ :*** *ಯಾವುದಾದರೂ **ಐದು** ಪ್ರಶ್ನೆಗಳಿಗೆ ಉತ್ತರಿಸಿ.*

1. ಹೊಸಗನ್ನಡ ಸಾಹಿತ್ಯದ ಮಹತ್ವವನ್ನು ಕುರಿತು ಬರೆಯಿರಿ.

2. ನಾಟಕದ ಸ್ವರೂಪ ಮತ್ತು ವಿಧಾನಗಳನ್ನು ಕುರಿತು ಬರೆಯಿರಿ.

3. ಪ್ರಬಂಧ ಮತ್ತು ಸಣ್ಣ ಕತೆಗಳ ಗುಣ–ಲಕ್ಷಣಗಳನ್ನು ತಿಳಿಸಿ.

4. 'ಯದುಗಿರಿಯ ಮೌನ ವಿಕಾಸ' ಮತ್ತು 'ಮಬ್ಬಿನಿಂದ ಮಬ್ಬಿಗೆ' ಕವಿತೆಗಳನ್ನು ವಿಮರ್ಶಿಸಿ.

5. 'ನಾನು ಕೊಂದ ಹುಡುಗಿ' ಮತ್ತು 'ಯಾರು ಹಿತವರು ನಿನಗೆ' ಕತೆಗಳ ವಸ್ತುವನ್ನು ವಿವೇಚಿಸಿ.

6. 'ಬೆಟ್ಟದ ಜೀವ' ಕಾದಂಬರಿಯ ವಸ್ತುವನ್ನು ಕುರಿತು ವಿಚಾರ ಮಾಡಿ.

7. ವಿಗಡ ವಿಕ್ರಮರಾಯನ ವ್ಯಕ್ತಿತ್ವವನ್ನು ವಿಶ್ಲೇಷಿಸಿ.

8. 'ಜನ್ನನ ಕಾವ್ಯಗಳಲ್ಲಿ ಪ್ರಣಯ ನಿರೂಪಣೆ' ಲೇಖನದ ಮಹತ್ವವೇನು? ವಿವರಿಸಿ.

9. 'ಹಗಲುಗನಸುಗಳು' ಸಂಕಲನದ ಯಾವುದಾದರೂ ಎರಡು ಪ್ರಬಂಧಗಳನ್ನು ವಿಮರ್ಶಿಸಿ.

10. **ನಾಲ್ಕಕ್ಕೆ** ಟಿಪ್ಪಣಿ ಬರೆಯಿರಿ :

    (ಅ) ಕಾದಂಬರಿ

    (ಆ) ವಿಮರ್ಶೆ ಸ್ವರೂಪ

    (ಇ) 'ಬೆಳಗು' ಕವಿತೆ

    (ಈ) 'ಕ್ಷಿತಿಜ'

    (ಉ) ಶಿವರಾಮಯ್ಯ

    (ಊ) ನಿರೀಶ

    (ಋ) ತೀ.ನಂ. ಶ್ರೀ

    (ಎ) ಗಾಡಿಯ ಪಯಣ

**Q.P. Code – 56612**

**ಅಂತಿಮ ಎಂ.ಎ. ಪದವಿ ಪರೀಕ್ಷೆ, ಅಕ್ಟೋಬರ್/ನವೆಂಬರ್ 2015**

**(ದೂರ ಶಿಕ್ಷಣ)**

**ಕನ್ನಡ**

**(DPB 520) Paper 2.2 – ತೌಲನಿಕ ಕಾವ್ಯ ಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆ**

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 80*

***ಸೂಚನೆ :*** *ಯಾವುದಾದರೂ **ಐದು** ಪ್ರಶ್ನೆಗಳಿಗೆ ಉತ್ತರಿಸಿ.*

1. ಕಾವ್ಯ ಪ್ರಯೋಜನವನ್ನು ತೌಲನಿಕವಾಗಿ ವಿವರಿಸಿ.

2. 'ಸ್ಫೂರ್ತಿ' ತತ್ವವನ್ನು ವಿವೇಚಿಸಿ.

3. ಉಪಮೆ, ರೂಪಕ, ಸಂಕೇತಗಳ ಸಂಬಂಧಾಂತರಗಳನ್ನು ಬರೆಯಿರಿ.

4. ರೀತಿ ಮತ್ತು ಶೈಲಿಗೆ ಇರುವ ಸಂಬಂಧಗಳನ್ನು ವಿವರಿಸಿ.

5. ಕೆಥಾರ್ಸಿಸ್, ಮಾನಸಿಕ ದೂರ ಮತ್ತು ಸಾಧಾರಣೀಕರಣದ ಕುರಿತು ಬರೆಯಿರಿ.

6. "ಧ್ವನಿಯೇ ಕಾವ್ಯದ ಆತ್ಮ" – ಈ ಹೇಳಿಕೆಯನ್ನು ವಿವರಿಸಿ.

7. ವಿಮರ್ಶಕನ ಅರ್ಹತೆಗಳ ಕುರಿತು ವಿವೇಚಿಸಿ.

8. ಸಮಾಜ ಕೇಂದ್ರಿತ ವಿಮರ್ಶೆಯ ಸ್ವರೂಪವನ್ನು ಬರೆಯಿರಿ.

9. ಓದುಗ ಕೇಂದ್ರಿತ ವಿಮರ್ಶೆ ಎಂದರೇನು? ವಿವೇಚಿಸಿ.

10. **ನಾಲ್ಕಕ್ಕೆ** ಟಿಪ್ಪಣಿ ಬರೆಯಿರಿ :

    (ಅ) ಅಭಿನವಗುಪ್ತ

    (ಆ) ಸಹೃದಯ

    (ಇ) ಸ್ವಭಾವೋಕ್ತಿ

    (ಈ) ಮಾರ್ಕ್ಸ್‌ವಾದಿ ವಿಮರ್ಶೆ

    (ಉ) ಪ್ರಾಯೋಗಿಕ ವಿಮರ್ಶೆ

    (ಊ) ಅನುಕರಣವಾದ

    (ಋ) ಚಿತ್ರತುರಗನ್ಯಾಯ

    (ಎ) ಪ್ಲೇಟೋ

---

**Q.P. Code – 56613**

## ಅಂತಿಮ ಎಂ.ಎ. ಪದವಿ ಪರೀಕ್ಷೆ, ಅಕ್ಟೋಬರ್/ನವೆಂಬರ್ 2015

## (ದೂರ ಶಿಕ್ಷಣ)

## ಕನ್ನಡ

## (DPB 530) Paper 2.3 – ಸಂಸ್ಕೃತಿ ನಿರ್ವಚನ ಮತ್ತು ಕರ್ನಾಟಕ ಸಂಸ್ಕೃತಿ

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 80*

***ಸೂಚನೆ :*** *ಯಾವುದಾದರೂ* ***ಐದು*** *ಪ್ರಶ್ನೆಗಳಿಗೆ ಉತ್ತರಿಸಿ.*

1. ಸಂಸ್ಕೃತಿ ಎಂದರೇನು? ಅದರ ಸ್ವರೂಪವನ್ನು ಕುರಿತು ಪರಿಚಯಿಸಿ.
2. ಸಂಸ್ಕೃತಿಯೆಂಬುದು ಒಂದು ಜೀವನ ಶೈಲಿ – ಈ ವಾಕ್ಯವನ್ನು ವಿವಿಧ ವಿದ್ವಾಂಸರ ಹಿನ್ನೆಲೆಯಲ್ಲಿ ಚರ್ಚಿಸಿ.
3. ಸಂಸ್ಕೃತಿ ಮತ್ತು ನಾಗರಿಕತೆ ಇವುಗಳ ಅಂತರ್‌ಸಂಬಂಧ ಕುರಿತು ಪರಾಮರ್ಶಿಸಿ.
4. ಕರ್ನಾಟಕ ಸಂಸ್ಕೃತಿಯ ಅನನ್ಯತೆ ಕುರಿತು ವಿವರಿಸಿ.
5. ಸಂಸ್ಕೃತಿಯ ವಿಕಾಸದ ಹಂತಗಳನ್ನು ವಿಶದಪಡಿಸಿ.
6. ಶಿಷ್ಟ ಮತ್ತು ಜನಪದ ಸಂಸ್ಕೃತಿಯ ಸ್ವಾರಸ್ಯವನ್ನು ವಿವರಿಸಿ.
7. ಪ್ರತಿ ಸಂಸ್ಕೃತಿ ಮತ್ತು ಉಪ ಸಂಸ್ಕೃತಿಗಳ ಗುಣಲಕ್ಷಣವನ್ನು ವಿವರಿಸಿ.
8. ವಸಾಹತುಶಾಹಿ ಮತ್ತು ನಿರ್ವಸಾಹತುಶಾಹಿ ಸಂಸ್ಕೃತಿಯ ವೈಶಿಷ್ಟ್ಯವನ್ನು ವಿವರಿಸಿ.
9. ಕರ್ನಾಟಕ ರಾಜಕೀಯ ಅವಸ್ಥಾಂತರಗಳನ್ನು ಕುರಿತು ಬರೆಯಿರಿ.
10. **ನಾಲ್ಕಕ್ಕೆ** ಟಿಪ್ಪಣಿ ಬರೆಯಿರಿ :

    (ಅ) ಸಂಸ್ಕೃತಿ ಮತ್ತು ಆಧುನಿಕರಣ

    (ಆ) ಸಂಸ್ಕೃತಿ ಮತ್ತು ಜಾಗತೀಕರಣ

    (ಇ) ಸಾಂಸ್ಕೃತಿಕ ಅನನ್ಯತೆ

    (ಈ) ಸಂಸ್ಕೃತಿ ಮತ್ತು ಸಮಾಜ

    (ಉ) ಬರಗೂರು ರಾಮಚಂದ್ರಪ್ಪ

    (ಊ) ಕರ್ನಾಟಕ ಸಾಮಾಜಿಕ ಅವಸ್ಥಾಂತರಗಳು

    (ಋ) ದೇಸೀವಾದ

    (ಎ) ಡಿ.ವಿ.ಜಿ.

---

**Q.P. Code – 56614**

**ಅಂತಿಮ ಎಂ.ಎ. ಪದವಿ ಪರೀಕ್ಷೆ, ಅಕ್ಟೋಬರ್/ನವೆಂಬರ್ 2015**

**(ದೂರ ಶಿಕ್ಷಣ)**

**ಕನ್ನಡ**

**(DPB 540) Paper 2.4.1 – ಜಾನಪದ ವಿಜ್ಞಾನ : ಕನ್ನಡ ಜನಪದ ಸಾಹಿತ್ಯ**

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 80*

***ಸೂಚನೆ :*** *ಯಾವುದಾದರೂ **ಐದು** ಪ್ರಶ್ನೆಗಳಿಗೆ ಉತ್ತರಿಸಿ.*

1. 'ಜನಪದರ ಅನಂತ ಕಾಲದ ಅನುಭವಗಳ ಸಾರ ಜನಪದ ಕಾವ್ಯ' – ವಿಶ್ಲೇಷಿಸಿ.

2. ಜನಪದ ಕಾವ್ಯಗಳ ಲಕ್ಷಣ ಮತ್ತು ಸ್ವರೂಪವನ್ನು ವಿವರಿಸಿ.

3. 'ಗರತಿಯ ಹಾಡು' ಕೃತಿಯಲ್ಲಿ ವ್ಯಕ್ತವಾಗಿರುವ ದೈವ ಸ್ತುತಿ ಮತ್ತು ತೌರಿನ ಹಂಬಲದ ಮಹತ್ವವನ್ನು ವಿವರಿಸಿ.

4. ಜನಪದ ಖಂಡ ಕಾವ್ಯಗಳ ಸ್ವರೂಪವನ್ನು ವಿವರಿಸಿ.

5. 'ಜನಪದ ನಾಟಕಗಳು ಗ್ರಾಮೀಣರ ಅಂತಃ ಸತ್ವಕ್ಕೆ ಹಿಡಿದ ಕನ್ನಡಿ' – ವಿಶ್ಲೇಷಿಸಿ.

6. 'ಗಂಗಿ–ಸಂಗ್ಯಾರ' ಸಂಬಂಧ ದ್ವಿಸ್ವಭಾವದ ಸಂಬಂಧ. ಅದು ಪ್ರಣಯವು ಹೌದು, ವ್ಯಭಿಚಾರವು ಹೌದು – ವಿಮರ್ಶಿಸಿ.

7. ಪ್ರಾಣಿ ಕಥೆಗಳ ಸ್ವರೂಪವನ್ನು ಕುರಿತು ಬರೆಯಿರಿ.

8. 'ನಮ್ಮ ಸುತ್ತಿನ ಗಾದೆಗಳು' ಸಂಕಲನದ ವೈಶಿಷ್ಟ್ಯವನ್ನು ನಿರೂಪಿಸಿ.

9. ಒಗಟುಗಳ ರಚನಾ ಕೌಶಲ್ಯವನ್ನು ಪಠ್ಯದ ಹಿನ್ನೆಲೆಯಲ್ಲಿ ವಿವರಿಸಿ.

10. **ನಾಲ್ಕಕ್ಕೆ** ಟಿಪ್ಪಣಿ ಬರೆಯಿರಿ :

    (ಅ) ಲಾವಣಿ

    (ಆ) ಗರತಿಯ ಹಾಡಿನಲ್ಲಿ ಸತಿ–ಪತಿ

    (ಇ) ಬಾಳ್ಯಾ

    (ಈ) ಹಲಸಂಗಿ ಗೆಳೆಯರು

    (ಉ) ಐತಿಹ್ಯ

    (ಊ) ಪುರಾಣ

    (ಋ) ಹಾಸ್ಯಕತೆಗಳು

    (ಎ) ಚಂದ್ರಶೇಖರ ಕಂಬಾರ

**Q.P. Code – 56615**

## ಅಂತಿಮ ಎಂ.ಎ. ಪದವಿ ಪರೀಕ್ಷೆ, ಅಕ್ಟೋಬರ್/ನವೆಂಬರ್ 2015

## (ದೂರ ಶಿಕ್ಷಣ)

## ಕನ್ನಡ

## (DPB 550) Paper 2.4.2 – ಆಧುನಿಕ ಕನ್ನಡ ಸಾಹಿತ್ಯ : ಸಣ್ಣಕತೆ ಮತ್ತು ಕಾದಂಬರಿ

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 80*

***ಸೂಚನೆ :*** *ಯಾವುದಾದರೂ **ಐದು** ಪ್ರಶ್ನೆಗಳಿಗೆ ಉತ್ತರಿಸಿ.*

1. ಆಧುನಿಕ ಸಣ್ಣಕತೆಯ ಬೆಳವಣಿಗೆಯನ್ನು ವಿವರಿಸಿ.

2. ದಲಿತ–ಬಂಡಾಯ ಕಾದಂಬರಿಗಳ ತಾತ್ವಿಕ ನೆಲೆಗಳನ್ನು ಚರ್ಚಿಸಿ.

3. 'ಸರಳತೆ, ಸಹಜತೆ, ಜೀವನಾನುಭವ ಮಾಸ್ತಿಯವರ ಕತೆಗಳ ಮೂಲದ್ರವ್ಯ' – ವಿವೇಚಿಸಿ.

4. 'ಕೊನೆಯ ಗಿರಾಕಿ' ಕಥೆಯನ್ನು ವಸ್ತು ಮತ್ತು ಧೋರಣೆಯ ದೃಷ್ಟಿಯಿಂದ ಪರಿಶೀಲಿಸಿ.

5. 'ಭಗವತಿ ಕಾಡು' ಕಥೆಯ ಆಶಯವನ್ನು ಸ್ಪಷ್ಟಪಡಿಸಿ.

6. 'ಮಾಡಿದ್ದುಣ್ಣೋ ಮಹಾರಾಯ' ಆದರ್ಶ ಮತ್ತು ವಾಸ್ತವದ ನೆಲೆಯಲ್ಲಿ ರೂಪುಗೊಂಡ ಕಾದಂಬರಿ – ಚರ್ಚಿಸಿ.

7. 'ಚಿರಸ್ಮರಣೆ' ಕಾದಂಬರಿಯಲ್ಲಿ ರೈತ ಹೋರಾಟ ಹೇಗೆ ವ್ಯಕ್ತಗೊಂಡಿದೆ? ಪರಿಶೀಲಿಸಿ.

8. ಚಿರುಕಂಡ, ಅಪ್ಪು – ಈ ಪಾತ್ರಗಳ ವೈಶಿಷ್ಟ್ಯವನ್ನು ವಿವರಿಸಿ.

9. 'ಕರ್ವಾಲೋ' ಕಾದಂಬರಿ ಹಾರುವ ಓತಿಯ ಶೋಧದೊಂದಿಗೆ ಮಾನವನ ಅನೇಕ ವರ್ತನೆಗಳನ್ನು ಅನಾವರಣಗೊಳಿಸಿದೆ – ವಿಚಾರ ಮಾಡಿ.

10. **ನಾಲ್ಕಕ್ಕೆ** ಟಿಪ್ಪಣಿ ಬರೆಯಿರಿ :

    (ಅ) ನವೋದಯ ಕಥೆಗಳ ಸ್ವರೂಪ

    (ಆ) ಹಿನ್ನೋಟ ತಂತ್ರ

    (ಇ) 'ಮಸುಮತ್ತಿ'

    (ಈ) 'ಕ್ಷಿತಿಜ'

    (ಉ) ಪ್ರಗತಿಶೀಲ ಕಥೆಗಳು

    (ಊ) ಸಿದ್ದಪ್ಪಾಜಿ

    (ಋ) ಪೊಲೀಸ್ ಸುಬ್ಬಯ್ಯ

    (ಎ) ಕರ್ವಾಲೋ ಪಾತ್ರ

---